ಅಸಲು ದಾವಾ ಸಂಖ್ಯೆ **56-2022** ಪಿ .ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **13.08.2025**

ಮು. ಪಾಟೀ ಸವಾಲು ಃ ಶ್ರೀ **SL** ನ್ಯಾಯಾವಾದಿಗಳಿಂದಃ

ನನ್ನ ತಮ್ಮ ವಿಜಯ್ ಕುಮಾರ್ ರೈಲ್ವೆ ಇಲಾಖೆಯಲ್ಲಿ ಸ್ಟೇಷನ್ ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ತಂದೆ ಜೀವಂತ ಇರುವವರೆಗೂ ನಾನು ಊರಿನಲ್ಲಿ ವಾಸ ಇದೆ, ನನ್ನ ತಂದೆಯ ಮರಣ ನಂತರ ನಾನು ಬೆಂಗಳೂರಿಗೆ ಹೋಗಿ ನೆಲಸಿದೆ, ಈಗ ನಾನು ಮೈಸೂರಿನಲ್ಲಿ ವಾಸ ಇದ್ದೇನೆ, ನಾನು ನಮ್ಮ ಊರನ್ನು ಬಿಟ್ಟು ಬೆಂಗಳೂರಿಗೆ ಹೋದಾಗ ದಾವಾ ಆಸ್ತಿಗಳನ್ನು ನಮ್ಮ ಊರಿನವರಿಗೆ ನೋಡಿಕೊಳ್ಳಲು ಬಿಟ್ಟಿದ್ದೆ , ಆಗಾಗ ಊರಿಗೆ ಬಂದು ಹೋಗುವುದು ಮಾಡುತ್ತಿದ್ದೆ.

2. ನನ್ನ ತಂದೆ ತನ್ನ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಯ ಮರಣ ನಂತರ ದಾವಾ ಆಸ್ತಿಗಳ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ನನ್ನ ತಮ್ಮ ವಿಜಯ್ ಕುಮಾರ್ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರು ಬಂದು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿ.

3. ಪ್ರತಿವಾದ ಪತ್ರದ ಖಂಡಿಕೆ 11 ರಲ್ಲಿ ಹೇಳಿರುವ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಏನು ತೊಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನುಗಳ ದಾಖಲೆಗಳು ನನ್ನ ಬಳಿ ಇಲ್ಲದೇ ಇದ್ದುದ್ದರಿಂದ ಸದರಿ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿರಲಿಲ್ಲ ಎಂದು ನುಡಿಯುತ್ತಾರೆ.

4. ನಮ್ಮ ಕುಟುಂಬಕ್ಕೆ ಸೇರಿದ ಕೆಲವು ಸ್ವತ್ತುಗಳನ್ನು ನಾನು, ನನ್ನ ತಮ್ಮ, ನನ್ನ ತಾಯಿ ಮತ್ತು ನನ್ನ ಅಕ್ಕಂದಿರು ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ . ಸರ್ವೆ ನಂ. 9 ರ ಜಮೀನನ್ನು ಈ ದಾವೆಗೆ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಈಗಾಗಲೇ ನಾವು ಅದನ್ನು ಮಾರಾಟ ಮಾಡಿರುವುದರಿಂದ ಈ ದಾವೆಗೆ ಸೇರಿಸಿರುವುದಿಲ್ಲ ಎಂದು

ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಾವು ಮಾರಾಟ ಮಾಡಿರುವ ಯಾವ ಜಮೀನನ್ನು ಈ ದಾವೆಗೆ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ಈಗ ತೋರಿಸಿದ ದಿ:26.05.2003 ರ ನೊಂದಾಯಿತ ಕ್ರಯ ಪತ್ರವು ನಾವು ಪುಟ್ಟ ಗಂಗಮ್ಮರವರಿಗೆ ಸರ್ವೆ ನಂ. 98/2 ರ ಜಮೀನನ್ನು ಮಾರಾಟ ಮಾಡಿರುವ ಕ್ರಯಪತ್ರವಾಗಿರುತ್ತದೆ. ಸಾಕ್ಷಿ ನೋಡಿ ಒಪ್ಪಿಕೊಂಡ ಸದರಿ ಕ್ರಯ ಪತ್ರವು ನೊಂದಾಯಿತ ಕ್ರಯ ಪತ್ರ ದೃಢಿಕೃತ ಪತ್ರವಾಗಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

6. ಸರ್ವೆ ನಂ.31/2 ರಲ್ಲಿ 1 ಎಕರೆ 24 ಗುಂಟೆ , ಸರ್ವೆ ನಂ.83/2 ಬಿ ರಲ್ಲಿ 5 ಗುಂಟೆ ಮತ್ತು ಸರ್ವೆ ನಂ. 5/2 ರಲ್ಲಿ 27 ಗುಂಟೆ ಜಮೀನನ್ನು ನಾನು, ನನ್ನ ತಾಯಿ ಮತ್ತು ನನ್ನ ತಂದೆ ಶಿವಯ್ಯ ಬಿನ್ ರಂಗೇಗೌಡರವರಿಗೆ 1,00,000/- ರೂ.ಗಳಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಮಾರಾಟ ಮಾಡಿರುವುದಿಲ್ಲ , ಸದರಿ ಮಾರಾಟವು ಆಗಿರುತ್ತದೆ ಎಂದು ಹೇಳುವ ಸಮಯದಲ್ಲಿ ನನ್ನ ತಂದೆ ಜೀವಂತ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಮೇಲಿನಂತೆ ಮಾರಾಟ ಮಾಡಲಾಗಿದೆ ಎಂದು 2 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ ಎಂದರೆ ಸಾಕ್ಷಿಯುು ನನ್ನ ತಮ್ಮನ ಹಿಸ್ಸೆಗೆ ಬಂದ ಜಮೀನನ್ನು ಮಾರಾಟ ಮಾಡಿರಬಹುದು ಅದರೆ ನನ್ನ ಹಿಸ್ಸೆಗೆ ಬಂದ ಜಮೀನನ್ನು ನಾನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

7. ಸದರಿ ಶಿವಯ್ಯರವರು ತಾವು ಕ್ರಯಕ್ಕೆ ಪಡೆದ ಈ ಮೇಲಿನ ಜಮೀನುಗಳಲ್ಲಿ ಕ್ರಯಕ್ಕೆ ಪಡೆದ ದಿನದಿಂದ ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಮೊದಲು ಶಿವಯ್ಯರವರು ಉಳುಮೆ ಮಾಡುತ್ತಿದ್ದರು, ಈಗ ಅದನ್ನು ನಾನು ನಿಲ್ಲಿಸಿರುವುದಾಗಿ ನುಡಿಯುತ್ತಾರೆ. ಶಿವಯ್ಯ ರವರ ಮರಣ ನಂತರ ಅವರ ಮಕ್ಕಳು ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

8. ಶಿವಯ್ಯರವರಿಗೆ ಕ್ರಯ ಮಾಡಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ನನ್ನ ತಾಯಿ ಮತ್ತು ನನ್ನ ತಮ್ಮ ಪೌತಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ, ಆ ರೀತಿ ಪೌತಿ ಖಾತೆ ಮಾಡಿಸಿಕೊಂಡ ನಂತರ ನನ್ನ ತಾಯಿ ಮತ್ತು ನನ್ನ ತಮ್ಮ ಮರಣ

ಹೊಂದಿರುತ್ತಾರೆ ಎಂದರೆ ಸರಿ. ಜಮೀನಿಗೆ ಸಂಬಂಧಿಸಿದಂತೆ 11-ಇ ಸ್ಕೆಚ್ ಅನ್ನು ಮತ್ತು ಇತರೆ ದಾಖಲೆಗಳನ್ನು ಹೊಂದಿಸಿಕೊಂಡು ನೊಂದಾಯಿತ ಕ್ರಯ ಪತ್ರವನ್ನು ಮಾಡಿಕೊಡುವಂತೆ ಶಿವಯ್ಯರವರು ತಮ್ಮ ಜೀವಿತ ಅವಧಿಯಲ್ಲಿ ನಮ್ಮಲ್ಲಿ ಹಲವು ಭಾರಿ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಆಗ ನನ್ನ ತಮ್ಮ ಶಿವಯ್ಯರವರ ಹೆಸರಿಗೆ ಕ್ರಯ ಪತ್ರವನ್ನು ಮಾಡಿಕೊಡಲು ಸಿದ್ದರಿದ್ದರು ಆಗ ನಾನು ಹೋಗಿರಲಿಲ್ಲ ಎಂದರೆ ಸರಿ. ಇದುವರೆವಿಗೂ ಶಿವಯ್ಯರವರ ವಾರಸ್ಸುದಾರರರಿಗೆ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ವ್ಯವಹಾರಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

9. ಸರ್ವೆ ನಂ 39/1 ವಿಸ್ತೀರ್ಣ 14 ಗುಂಟೆಗೆ ಸಂಬಂಧಿಸದಂತೆ 20 ಸಾವಿರ ರೂ.ಗಳನ್ನು ಪಡೆದು ಅದರ ಸ್ವಾಧೀನವನ್ನು ಡಿ.ಕೆ. ಲೋಕೇಶ್ ಬಿನ್ ಆರ್. ಕೃಷ್ಣಪ್ಪನವರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ 104/7 3 ಗುಂಟೆ , ಸರ್ವೆ ನಂ.105/2 ಎ-2 ರಲ್ಲಿ 12 -1/2 ಗುಂಟೆ ಜಮೀನುಗಳಿಗೆ ಸಂಬಂಧಿಸಿದಂತೆ 20 ಸಾವಿರ ಪಡೆದು ಅದರ ಸ್ವಾದೀನವನ್ನು ಪ್ರಕಾಶ್ ಬಿನ್ ಲಕ್ಷ್ಮಣ ರವರಿಗೆ ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ಡಿ. ಕೆ ಲೋಕೇಶ್ ಮತ್ತು ಪ್ರಕಾಶ್ ರವರು ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ